1622 (2308) ಶ್ರೀ ರಾಜೇಂದ್ರ ವರ್ಮಾ (ಹುಲಸೂರು) :–ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಲಸೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜೀರಿಗ್ಯಾಳ ಮತ್ತು ಮಾಣಿಕೇಶ್ವರಿ ಗ್ರಾಮಗಳಲ್ಲಿ ಬ್ಯಾರೇಜ್ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಯಿತು;

ಆ) ಇಲ್ಲಿಯವರೆಗೆ ಇದಕ್ಕಾಗಿ ಮಾಡಲಾದ ಹಣವೆಷ್ಟು;

ಇ) ಈ ಬ್ಯಾರೇಜುಗಳನ್ನು ನಿಗಧಿತ ಸಮಯದಲ್ಲಿ ಮುಗಿಸುವ ಬಗ್ಗೆ ಕಾಲಮಿತಿಯನ್ನು ನಿಗಧಿಪಡಿಸಲಾಗಿದೆಯೇ;

ಈ) ಹಾಗಿದ್ದಲ್ಲಿ, ಇದರ ಕಾಮಗಾರಿಗಳು ಈಗ ಯಾವ ಹಂತದಲ್ಲಿವೆ;

ಉ) ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಋ) ಈ ಭಾಗದ ರೈತರ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಈ ನಿರ್ಮಾಣ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ಹುಲಸೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಜೀರಗಿಹಾಳ್ ಮತ್ತು ಮಾಣಿಕೇಶ್ವರ ಬ್ಯಾರೇಜುಗಳ ಕಾಮಗಾರಿಗಳನ್ನು ಜೂನ್ 2006 ರಲ್ಲಿ ಪ್ರಾರಂಭಿಸಲಾಗಿದೆ.

ಆ) ಸದರಿ ಬ್ಯಾರೇಜುಗಳಿಗೆ ಫೆಬ್ರವರಿ 2007ರ ಅಂತ್ಯಕ್ಕೆ ರೂ.68.00 ಲಕ್ಷ ವೆಚ್ಚ ಮಾಡಲಾಗಿದೆ.

ಇ) ಈ ಬ್ಯಾರೇಜುಗಳನ್ನು 18 ತಿಂಗಳ ಕಾಲಮಿತಿಯಲ್ಲಿ ಡಿಸೆಂಬರ್ 2007ರ ಅಂತ್ಯದವರೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಬ್ಯಾರೇಜುಗಳ ಅಡಿಪಾಯದ ಅಗೆತದ ಕಾಮಗಾರಿಗಳು ಪೂರ್ಣಗೊಂಡಿದ್ದು, ಅಡಿಪಾಯ ಕಾಂಕ್ರಿಟ್ ಕೆಲಸ ಪ್ರಗತಿಯಲ್ಲಿದೆ.

ಉ) ಕಾಮಗಾರಿಗಳು ಯೋಜನೆಯಾನುಸಾರ ಪ್ರಗತಿಯಲ್ಲಿದ್ದು, ಮಂದಗತಿಯಲ್ಲಿ ಸಾಗುತ್ತಿಲ್ಲ.

ಊ) ಉದ್ಭವಿಸುವುದಿಲ್ಲ.

ಋ) ಬ್ಯಾರೇಜ್ ಕಾಮಗಾರಿಗಳಿಗೆ ಅವಶ್ಯಕ ಅನುದಾನ ಒದಗಿಸಿ ಕಾಮಗಾರಿಗಳನ್ನು ನಿಗಧಿತ ಕಾಲಮಿತಿಯಲ್ಲಿ ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1623 (2113) ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ) :–
ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಪ್ರಸ್ತುತ ವರ್ಷದಲ್ಲಿ ಪಂಚಾಯಿತಿವಾರು ಬಿಡುಗಡೆ ಮಾಡಿರುವ ಮನೆಗಳು ಎಷ್ಟು;

2) ರಾಜ್ಯದಲ್ಲಿ ಪಟ್ಟಣ ಪ್ರದೇಶಗಳನ್ನು ಹೊರತುಪಡಿಸಿ ಗ್ರಾಮೀಣ ಭಾಗದಲ್ಲಿರುವ ವಸತಿಹೀನರ ಜನಗಣತಿಯಾಗಿದಿಯೇ;

3) ಹಾಗಿದ್ದಲ್ಲಿ, ವಸತಿ ಹೀನರ ಒಟ್ಟು ಸಂಖ್ಯೆ ಎಷ್ಟು;

4) ರಾಜ್ಯದಲ್ಲಿ ವಿವಿಧ ಯೋಜನೆಗಳ ಅಡಿಯಲ್ಲಿ ಪ್ರಸಕ್ತ ವರ್ಷದಲ್ಲಿ ಮಂಜೂರಾದ ಮನೆಗಳು ಎಷ್ಟು;

5) ರಾಜ್ಯದಲ್ಲಿರುವ ವಸತಿ ಸಮಸ್ಯೆಯನ್ನು ಸಂಪೂರ್ಣವಾಗಿ ನಿವಾರಿಸಲು ಬೇಕಾಗಿರುವ ಸಮಯವೆಷ್ಟು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

1) 2006–07ನೇ ಸಾಲಿಗೆ ಗ್ರಾಮೀಣ ಆಶ್ರಯ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿಗೆ 60 ಹಾಗೂ 2001ರ ಜನಗಣತಿಯ ಪ್ರಕಾರ 10000 ಜನಸಂಖ್ಯೆಯನ್ನು ಮೀರಿದ ಗ್ರಾಮಪಂಚಾಯಿತಿಗಳಿಗೆ ಹೆಚ್ಚುವರಿಯಾಗಿ 60 ಮನೆಗಳ ಗುರಿಯನ್ನು ನೀಡಲಾಗಿದೆ.